

ಹ್ಯಾನ್‌ಡೋರ್ಫ್‌ನ ರಸ್ತೆ ಬದಿ ಅನಾವರಣಗೊಂಡ ಕಲಾಲೋಕ



ಹಳೆ ಸಾಮಾನುಗಳನ್ನು ಮಾರಾಟ ಮಾಡಲೊಂದು ಅಂಗಡಿ

ಜರ್ಮನ್ ಹಳ್ಳಿಯಾಗಿ ಬೆಳೆಸುತ್ತಾರೆ. ರಸ್ತೆ ಬದಿಗೆ ಸಾಲು ಮರಗಳನ್ನು ಹಚ್ಚಿ ಅಂದಗೊಳಿಸುತ್ತಾರೆ. ಜರ್ಮನಿಯ ಕೃಷಿ, ಕುಲಕಸುಬುಗಳಾದ ಕಮ್ಮಾರಿಕೆ, ಬಡಗಿತನ, ಅಡುಗೆ ಎಲ್ಲವೂ ಈ ನೆಲದಲ್ಲಿ ಹೊಸ ಬೆಳೆಯಾಗುತ್ತವೆ. ಈ ಜನರನ್ನು ಝೀಬ್ರಾ ಹಡಗಿನಲ್ಲಿ ಕರೆತಂದವರು ಕ್ಯಾಪ್ಟನ್ ಹ್ಯಾನ್. ಆತನ ನೆನಪಿಗೆ ಈ ಹಳ್ಳಿಗೆ ಹ್ಯಾನ್‌ಡೋರ್ಫ್ ಅಂತಲೇ ನಾಮಕರಣ ಮಾಡಿ, ನಗರದ ಮಧ್ಯದಲ್ಲಿ ಹ್ಯಾನನ ಪುತ್ಥಳಿಯನ್ನೂ ಸ್ಥಾಪಿಸುತ್ತಾರೆ. ಜರ್ಮನಿಯಿಂದ ಮೊದಲಿಗೆ ಇಲ್ಲಿಗೆ ಬಂದ 52 ಕುಟುಂಬಗಳ ಹೆಸರನ್ನೂ ಪಯನಿಯರ್ ಮೆಮೋರಿಯಲ್ ಗಾರ್ಡನ್‌ನಲ್ಲಿ ಕೆತ್ತಲಾಗಿದೆ.

ಇವತ್ತು ಇಲ್ಲಿಯ ನಿವಾಸಿಗಳೆಲ್ಲರೂ ಅಂದು ಬಂದವರ ಕುಟುಂಬಸ್ಥರೇ. ತಮ್ಮ ಹಿರಿತಲೆಗಳನ್ನು ಈ ರೀತಿ ನೆನೆದುಕೊಳ್ಳುವ ಇಂದಿನ ತಲೆಮಾರು ಆದಷ್ಟೂ ಜರ್ಮನ್ ದೇಸೀಯತೆಯನ್ನು ಉಳಿಸಿಕೊಳ್ಳಲು ಪ್ರಜ್ಞಾಪೂರ್ವಕವಾಗಿ ಪ್ರಯತ್ನಿಸುವುದರಿಂದ ಹ್ಯಾನ್‌ಡೋರ್ಫ್‌ಗೆ ಸುತ್ತು ಹಾಕಿದರೆ ಜರ್ಮನಿಯ ನಗರಕ್ಕೆ ಭೇಟಿ ಇತ್ತು ಬಂದಂತೆಯೇ ಆಗುತ್ತದೆ. ಈ ಮಧ್ಯೆ ಮೊದಲ ಮಹಾಯುದ್ಧದ ಸಮಯದಲ್ಲಿ (1917) ಈ ಹಳ್ಳಿಯ ಹೆಸರನ್ನು ಅಂಬ್ಲಿಸೈಡ್ ಎಂದು ಬದಲಾಯಿಸಿ, 1935ರಲ್ಲಿ ಮರಳಿ ಹ್ಯಾನ್‌ಡೋರ್ಫ್ ಎಂದೇ ನಾಮಕರಣ ಮಾಡಿದ ಚರಿತ್ರೆಯೂ ಇದೆ.

ಅಡಿಲೇಡಿನಿಂದ 28 ಕಿ.ಮೀ. ದೂರದಲ್ಲಿರುವ ಈ ಪುಟ್ಟ ಪಟ್ಟಣ ಇಂದು ಅಡಿಲೇಡಿಗೆ ಭೇಟಿ ನೀಡುವವರೆಲ್ಲ ನೋಡಲೇಬೇಕಾದ ಊರಾಗಿ ಬೆಳೆದಿದೆ. ಇಲ್ಲಿರುವುದು ಒಂದೇ ಬೀದಿ. ಅದು ಪ್ರವಾಸಿಗರಿಂದ ಸದಾ ಗಿಜಿಗುಡುತ್ತದೆ. 19ನೇ ಶತಮಾನದಲ್ಲಿ ನೆಟ್ಟ ಮರಗಳು ಇಂದಿಗೂ ನೆರಳು ನೀಡುತ್ತಿವೆ. ಊರಿನ ಸೌಂದರ್ಯ ಹೆಚ್ಚಿಸುತ್ತಿವೆ.

ಹ್ಯಾನ್‌ಡೋರ್ಫ್‌ನಲ್ಲಿ ಏನಿದೆ? ಯಾಕಾಗಿ ಭೇಟಿ ನೀಡಬೇಕೆಂದು ಕೇಳಿದರೆ ಉತ್ತರಿಸುವುದು ಕಷ್ಟ. ಸ್ಥಳೀಯರು ಕೈಯಿಂದಲೇ ಮಾಡಿದ ಮೇಣದ ಬತ್ತಿಗಳು, ಬಟ್ಟೆಗಳು, ಕಸೂತಿ ವಸ್ತ್ರಗಳು ಆಕರ್ಷಕವಾಗಿವೆ. ಸುತ್ತಮುತ್ತ ಬೆಳೆಯುವ ಕಪ್ಪು ದ್ರಾಕ್ಷಿಯ ವೈನ್‌ಗಳಿಗಾಗಿ ಈ ಊರು ಪ್ರಸಿದ್ಧ. ವಾರಾಂತ್ಯಗಳಲ್ಲಿ ಜನ ವೈನಿನ ರುಚಿ ನೋಡುವ ಸಲುವಾಗಿಯೇ ಇಲ್ಲಿಗೆ ಬರುತ್ತಾರೆ. ಚಾಕೊಲೇಟ್‌ಗಳು, ಕೇಕ್‌ಗಳು ಸ್ಥಳೀಯರೇ ಮಾಡಿದ್ದು, ಗಮನಸೆಳೆಯುತ್ತವೆ. ಸ್ಥಳೀಯವಾಗಿ ಬೆಳೆಯುವ ಹೂವು, ಹಣ್ಣು, ಮಾಂಸವು ದಂಡಿಯಾಗಿ ಸಿಗುತ್ತವೆ.

ಈ ಊರು ಆಸ್ಟ್ರೇಲಿಯಾದಲ್ಲಿದ್ದೂ ಭಿನ್ನವಾಗಿ ಕಾಣುವುದರಿಂದ ಇಲ್ಲಿಯ ಜನಗಳ ಬಟ್ಟೆಬರೆ, ಭಾಷೆ, ಬದುಕು, ಇಂದಿಗೂ ಜರ್ಮನಿಯನ್ನೇ ಹೋಲುವುದರಿಂದ ಹ್ಯಾನ್‌ಡೋರ್ಫ್ ಭೇಟಿ ಬಹಳ ಕಾಲ ಮನಸಿನಲ್ಲಿ ಉಳಿಯುತ್ತದೆ.

ಪ್ರತಿಕ್ರಿಯಿಸಿ: feedback@sudha.co.in


